**ಸಾಕ್ಷಿಗೆ ದಿನಾಂಕ:05-08-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀ. BPR ವಕೀಲರಿಂದ ::**

ಕುಡ್ಲೂರು ಗ್ರಾಮದ ಸರ್ವೇ ನಂಬರ್ 119 ರ ಒಟ್ಟು ವಿಸ್ತೀರ್ಣ 6 ಎಕರೆ 21 ಗುಂಟೆ ಆಗಿರುತ್ತದೆ ಎಂದರೆ ಸರಿ. ಅದರಲ್ಲಿ 6 ಗುಂಟೆ ಖರಾಬು ಇರುತ್ತದೆ ಎಂದರೆ ಸರಿ. ಈಶ್ವರಪ್ಪ ಬಿನ್ ಹುಚ್ಚ ಹನುಮಯ್ಯ, ರುದ್ರಪ್ಪ ಬಿನ್ ಸಣ್ಣ ತಿಮ್ಮಯ್ಯ, ಹೆಚ್ ಮಹಾದೇವಪ್ಪ ಬಿನ್ ಹನುಮಂತಪ್ಪ ರವರುಗಳು 14.07.1977 ರಂದು ಒಂದು ವಿಭಾಗ ಪತ್ರವನ್ನು ಮಾಡಿಕೊಂಡಿದ್ದು ಅದರಂತೆ ಈಶ್ವರಪ್ಪ ಬಿನ್ ಹುಚ್ಚ ಹನುಮಯ್ಯ ರವರಿಗೆ 4 ಎಕರೆ 21 ಗುಂಟೆ, ರುದ್ರಪ್ಪ ಬಿನ್ ಸಣ್ಣ ತಿಮ್ಮಯ್ಯ ರವರಿಗೆ 1 ಎಕರೆ ಮತ್ತು ಹೆಚ್ ಮಹಾದೇವಪ್ಪ ಬಿನ್ ಹನುಮಂತಪ್ಪ ರವರಿಗೆ 1 ಎಕರೆ ಜಾಗ ಬಂದಿರುತ್ತದೆ ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ ಖರಾಬು ಜಾಗವನ್ನು ಸಹ ಸೇರಿಸಿರುತ್ತಾರೆ ಎಂದರೆ ಸರಿ. ಸದರಿ ಖರಾಬು ಜಾಗವನ್ನು ಸೇರಿಸಿಕೊಂಡು ವಿಭಾಗ ಮಾಡಿಕೊಳ್ಳಲು ಅವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈಶ್ವರಪ್ಪ ಬಿನ್ ಹುಚ್ಚ ಹನುಮಯ್ಯ ರವರಿಗೆ ಬಂದ ಜಾಗದಲ್ಲಿ 2 ಎಕರೆ 10 ವರೆ ಗುಂಟೆ ಜಾಗವನ್ನು ಅವರ ತಮ್ಮ ಗಂಗಾಧರಪ್ಪ ರವರಿಗೆ ನೀಡಿರುತ್ತಾರೆ ಎಂದರೆ ಸರಿ. ಅವರಿಗೆ ಬಾಕಿ ಉಳಿದ ಎರಡು ಎಕರೆ ಹತ್ತುವರೆ ಗುಂಟೆ ಜಾಗವನ್ನು ಅವರೇ ಉಳಿಸಿಕೊಂಡಿರುತ್ತಾರೆ ಎಂದರೆ ಸರಿ.

1990-91 ನೇ ಸಾಲಿನಲ್ಲಿ ಈಶ್ವರಪ್ಪ ಮತ್ತು ಅವರ ಮಗ ಕೆ ಇ ಹಾಲಪ್ಪ ರವರು ಅದೇ ಗ್ರಾಮದ ಕೆ ಎನ್ ಮಹೇಶ್ವರಪ್ಪ ಎನ್ನುವವರಿಗೆ 1481/1990-91 ರ ಕ್ರಯಪತ್ರದಂತೆ 8 ಗುಂಟೆ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅದೇ ಜಾಗವನ್ನು 1993-94 ರಲ್ಲಿ SR NO.1420/1993-94 ರಂತೆ ಕೆ ಎನ್ ಮಹೇಶ್ವರಪ್ಪ ರವರು ಕೆ ಎಸ್ ಹಾಲಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಹಾಲಪ್ಪ ರವರು 2008-09 ರಲ್ಲಿ ಸದರಿ ಜಾಗವನ್ನು ನನ್ನ ತಮ್ಮ ಶಿವಕುಮಾರ್ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಾಗದ ಚೆಕ್ಕುಬಂದಿ - ಪೂರ್ವಕ್ಕೆ ನಮ್ಮ ಜಮೀನು, ಪಶ್ಚಿಮಕ್ಕೆ ಹಾಲಪ್ಪ ರವರ ಜಮೀನು, ಉತ್ತರಕ್ಕೆ ನಮ್ಮ ಜಮೀನು, ದಕ್ಷಿಣಕ್ಕೆ ನಂಜುಂಡಪ್ಪ ರವರ ಜಮೀನು ಬರುತ್ತದೆ.

ಸದರಿ ಜಮೀನಿನ ಪೂರ್ವದಲ್ಲಿ ಇರುವ ನಮ್ಮ ಜಮೀನು ಅನ್ನು ಈಶ್ವರಪ್ಪ ಎನ್ನುವವರಿಂದ ನಾವು ಖರೀದಿ ಮಾಡಿರುತ್ತೇವೆ. ದಾವಾ ಸರ್ವೇ ನಂಬರ್ ನಲ್ಲಿ 1990-91 ರಲ್ಲಿ ಎಸ್ ನಂ.1482/1990-91 ರಂತೆ ಕೆ ಎಂ ಚಂದ್ರಪ್ಪ ಎನ್ನುವವರಿಗೆ ಈಶ್ವರಪ್ಪ ಮತ್ತು ಅವರ ಮಗ ಹಾಲಪ್ಪ ರವರು 5 ಗುಂಟೆ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾ ಸರ್ವೇ ನಂಬರ್ ನಲ್ಲಿ 1990-91 ರಲ್ಲಿ ಎಸ್ ನಂ.1483/1990-91 ರಂತೆ ಈಶ್ವರಪ್ಪ ಮತ್ತು ಕೆ ಇ ಹಾಲಪ್ಪ ರವರು ಸಿ ಹಾಲಪ್ಪ ರವರಿಗೆ 5 ಗುಂಟೆ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಾಗಕ್ಕೆ ಸಂಬಂಧಪಟ್ಟಂತೆ ಖಾತೆಯು ಸಿ ಹಾಲಪ್ಪ ರವರ ಕುಟುಂಬಸ್ಥರ ಹೆಸರಿಗೆ ಬದಲಾವಣೆ ಆಗಿರುವುದಿಲ್ಲ ಎಂದರೆ ಸರಿ. ನನ್ನ ತಂದೆಯ ಹೆಸರು ಟಿ ಬಸಪ್ಪ ಆಗಿರುತ್ತದೆ ಎಂದರೆ ಸರಿ. ನನ್ನ ತಂದೆಗೆ ಎಸ್ ಆರ್ ನಂ. 652/1992-93 ರಂತೆ 22 ಮುಕ್ಕಾಲು ಗುಂಟೆ ಜಾಗವನ್ನು ಈಶ್ವರಪ್ಪ ಮತ್ತು ಅವರ ಮಗ ಹಾಲಪ್ಪ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಜಾಗದ ಚೆಕ್ಕುಬಂದಿ- ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನಮ್ಮ 8 ಗುಂಟೆ ಜಮೀನು, ಉತ್ತರಕ್ಕೆ ನಂಜುಂಡಪ್ಪ ರವರ ಜಮೀನು, ದಕ್ಷಿಣಕ್ಕೆ ನಮ್ಮ 29 ಗುಂಟೆ ಜಮೀನು ಇರುತ್ತದೆ. ಸದರಿ ಜಾಗವು ನಮ್ಮ ಕುಟುಂಬದಲ್ಲಿ ಆದ ವಿಭಾಗದಲ್ಲಿ ವಾದಿಗೆ ಹೋಗಿರುತ್ತದೆ ಎಂದರೆ ಸರಿ. 2015-16 ರಲ್ಲಿ ಎಸ್ ಆರ್ ನಂ. 3277/2015-16 ರಂತೆ ಕೆ ಇ ಹಾಲಪ್ಪ ಮತ್ತು ಅವರ ಮಕ್ಕಳು ಕೆ ಸಿ ನಾಗರಾಜಪ್ಪ ರವರಿಗೆ ಒಂದು ಎಕರೆ 6 ಕಾಲು ಗುಂಟೆ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

1995-96 ರಲ್ಲಿ ಎಸ್ ಆರ್ ನಂ.432/1995-96 ರಂತೆ ಗಂಗಾಧರಪ್ಪ ಮತ್ತು ಮಕ್ಕಳು ಕೆ ಸಿ ನಂಜುಂಡಪ್ಪ ರವರಿಗೆ 2 ಎಕರೆ 10 ಗುಂಟೆ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಕೆ ಸಿ ನಂಜುಂಡಪ್ಪ ರವರು ಜಿ ಎನ್ ಶಿವಣ್ಣ ರವರಿಗೆ 2004-05 ರಲ್ಲಿ ಎಸ್ ಆರ್ ನಂ.739/2004-05 ರಂತೆ ಸದರಿ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನಂತರದಲ್ಲಿ ಜಿ ಎನ್ ಶಿವಣ್ಣ ರವರು ಎಸ್ ಆರ್ ನಂ.5310/2011-12 ರಂತೆ 5 ಗುಂಟೆ ಜಾಗವನ್ನು ಸಿ ಹಾಲಪ್ಪ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ 5 ಗುಂಟೆ ಜಾಗವನ್ನು ಸಿ ಹಾಲಪ್ಪ ರವರ ಹೆಂಡತಿ ರತ್ನಮ್ಮ ರವರು ಕೆ ಎನ್ ಸತೀಶ ರವರಿಗೆ ಎಸ್ ಆರ್ ನಂ. 1631/2020-21 ರಂತೆ ಹಕ್ಕು ಖುಲಾಸೆ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಕೆ ಸಿ ನಂಜುಂಡಪ್ಪ ರವರು ವಿ ಎಂ

ಸವಿತಾ ರವರಿಗೆ 11 ಗುಂಟೆ ಜಾಗವನ್ನು ಎಸ್ ಆರ್ ನಂ.2162/2007-08 ರಂತೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ರುದಪ್ಪ ಬಿನ್ ಸಣ್ಣ ತಿಮ್ಮಯ್ಯ ರವರಿಗೆ ಬಂದ ಒಂದು ಎಕರೆ ಜಮೀನಿನ ಪೈಕಿ ಎಸ್ ಆರ್ ನಂ.1562/1979-80 ರಂತೆ ಎಂ ಮರಳುಸಿದ್ದಪ್ಪ ರವರಿಗೆ 5 ಗುಂಟೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಮರಳುಸಿದ್ದಪ್ಪ ನವರು ಕೆ ಆರ್ ಹಾಲಪ್ಪ ರವರಿಗೆ ಸದರಿ 5 ಗುಂಟೆ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 1563/1979-80 ರಂತೆ ರುದಪ್ಪ ರವರ ಮಗ ಕುಮಾರ್ ರವರು ಕೆ ಆರ್ ಹಾಲಪ್ಪ ರವರಿಗೆ 5 ಗುಂಟೆ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 1980-81 ರಲ್ಲಿ ಎಸ್ ಆರ್ ನಂ. 2107/1980-81 ರಂತೆ ರುದ್ರಪ್ಪನ ಮಗ ಕುಮಾರ್ ರವರು ನನ್ನ ತಂದೆಗೆ 29 ಗುಂಟೆ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

ಎಲ್ಲಾ ಮಾರಾಟಗಳ ನಂತರ ಕೆ ಸಿ ನಂಜುಂಡಪ್ಪ ರವರ ಹೆಸರಿನಲ್ಲಿ ಒಂದು ಎಕರೆ 34 ಗುಂಟೆ ಜಾಗವು ಉಳಿದಿರುತ್ತದೆ ಎಂದರೆ ಸರಿ. ರುದ್ರಪ್ಪ ರವರ ಹೆಸರಿನಲ್ಲಿ ಕೇವಲ 1 ಗುಂಟೆ ಜಾಗವು ಬಾಕಿ ಉಳಿದಿರುತ್ತದೆ ಎಂದರೆ ಸರಿ. ಹೆಚ್ ಮಹಾದೇವಪ್ಪ ರವರ 1 ಎಕರೆ ಜಾಗದ ಪೈಕಿ 2015-16 ರಲ್ಲಿ ಎಸ್ ಆರ್ ನಂ.6537/2015-16 ರಂತೆ ಕೆ ಎಂ ಮಲ್ಲಿಕಾರ್ಜುನ ರವರಿಗೆ 11 ಗುಂಟೆ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ಕೆ ಸಿ ಬಸವರಾಜಪ್ಪ ರವರಿಗೆ 29 ಗುಂಟೆ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಕೆ ಸಿ ಬಸವರಾಜಪ್ಪ ರವರು ಎಸ್ ಆರ್ ನಂ. 5816/2016-17 ರಂತೆ ಕೆ ಎಂ ಮಲ್ಲಿಕಾರ್ಜುನ ರವರಿಗೆ 25 ಗುಂಟೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಕೆ ಸಿ ಬಸವರಾಜಪ್ಪ ರವರು ಕೆ ಸಿ ನಂಜುಂಡಪ್ಪ ರವರಿಗೆ ಬಾಕಿ ಉಳಿದ 4 ಗುಂಟೆ ಜಾಗವನ್ನು ಎಸ್ ಆರ್ ನಂ.1632/2020-21 ರ ದಾನಪತ್ರದ ಮುಖಾಂತರ ವರ್ಗಾವಣೆ ಮಾಡಿರುತ್ತಾರೆ ಎಂದರೆ ಸರಿ.

ಸರ್ವೇ ನಂಬರ್ 119 ರಲ್ಲಿ 11.01.2012 ರಂದು ದುರಸ್ತಿ ಆಗಿದ್ದು, ಸದರಿ ಸಮಯದಲ್ಲಿ 5 ವರೆ ಗುಂಟೆ ಖರಾಬು ಇರುವುದಾಗಿ ನಮೂದು ಇರುತ್ತದೆ ಎಂದರೆ ಸರಿ. ಸರ್ವೇ ನಂಬರ್ 119 ರಲ್ಲಿ ಈಗ ಇರುವ ಹಕ್ಕುದಾರರು ತಮ್ಮ ಆಸ್ತಿಗಳನ್ನು ಕ್ರಯಕ್ಕೆ ಪಡೆದ ವ್ಯಕ್ತಿಗಳಾಗಿರುತ್ತಾರೆ ಎಂದರೆ ಸರಿ. ಈಶ್ವರಪ್ಪ ಬಿನ್ ಹುಚ್ಚಯ್ಯ ರವರು 2 ಎಕರೆ 10 ವರೆ ಗುಂಟೆ ಪೈಕಿ 8 ಗುಂಟೆ ಕೆ ಬಿ ಶಿವಕುಮಾರ್ ರವರಿಗೆ, 5 ಗುಂಟೆ ಕೆ ಎಂ ಚಂದ್ರಪ್ಪ ರವರಿಗೆ, ಸಿ ಹಾಲಪ್ಪ ರವರಿಗೆ 5 ಗುಂಟೆ, ಕೆ ಆರ್ ಹಾಲಪ್ಪ ರವರಿಗೆ 3 ಗುಂಟೆ ಮತ್ತು ವಾದಿ ಕೆ ಬಿ

ಶಿವಕುಮಾರ್ ರವರಿಗೆ 22 ಮುಕ್ಕಾಲು ಗುಂಟೆ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಹಿಗೆ ಒಟ್ಟು ಒಂದು ಎಕರೆ 3 ಮುಕ್ಕಾಲು ಗುಂಟೆ ಕ್ರಯ ಮಾಡಲಾಗಿರುತ್ತದೆ ಎಂದರೆ ಸರಿ. ಅದನ್ನು ಹೊರತುಪಡಿಸಿ ಇನ್ನು ಒಂದು ಎಕರೆ 6 ಕಾಲು ಗುಂಟೆ ಜಾಗವು ಖರಾಬು ಸೇರಿ ಉಳಿಯಬೇಕಾಗುತ್ತದೆ ಎಂದರೆ ಸರಿ. ಅದರ ಪೈಕಿ 1 ಎಕರೆ ಮುಕ್ಕಾಲು ಗುಂಟೆ ಮಾತ್ರ ಈಶ್ವರಪ್ಪ ರವರಿಗೆ ಹಕ್ಕು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕೆ ಸಿ ನಾಗರಾಜಪ್ಪ ರವರು ಎಸ್ ಆರ್ 3277/2015-16 ರಂತೆ ಕ್ರಯಕ್ಕೆ ಪಡೆದ ಜಾಗದಲ್ಲಿ ಅವರಿಗೆ ಕೇವಲ 1 ಎಕರೆ ಮುಕ್ಕಾಲು ಗುಂಟೆ ಜಾಗ ಮಾತ್ರ ಮಾರಾಟ ಮಾಡಲು ಹಕ್ಕು ಇತ್ತು ಎಂದರೆ ಸರಿ. ಆದರೆ ಅವರು ಖರಾಬು ಸೇರಿ 1 ಎಕರೆ 6 ಕಾಲು ಗುಂಟೆ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಮೇಲೆ ಹೇಳಿದ ಕ್ರಯಪತ್ರಗಳಂತೆ ಪ್ರತಿವಾದಿಗಳು ಅವರ ಜಾಗದಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: